Sri G. A. THIMMAPPA GOWDA.—As this bridge was included during the previous year and this project is very important and necessary, will the Government kindly include in the next year's Budget?

Sri VEERENDRA PATIL.—I cannot off-hand give an assurance to the Hon'ble Member. But this much is true that this is a very important bridge, and Government after consulting the technical experts have come to the decision that if at all a bridge has to be constructed, it should be constructed at Keralapur. In view of its importance, we shall try our best to include or start it next year.

Mr. SPEAKER.—The Hon'ble Member wants something more—about next year's Budget.

Sri S. NIJALINGAPPA (Chief Minister).—He is more positive about the place and he will have it.

Mr. SPEAKER.—No more supplementaries as that assurance is something.

Formation of Agricultural Colonies.

*Q.—300. Sri K. P. REVANNA SIDDAPPA (Tiptur).

Will the Government be pleased to state:—

(*a*) the places in the State wherein they have reserved lands for the formation of agricultural colonies together with the extent of lands so reserved;

(*b*) since how many years such lands are set apart for the said purpose;

(*c*) the average yield from such lands;

(*d*) the extent of land lying fallow without being cultivated;

(*e*) whether any ryots have applied for such fallow lands for cultivation purposes?

A.—Sri M. V. KRISHNAPPA (Minister for Revenue).—

(*a*) As per statement 'A' below.

(*b*) It ranges from one to fifteen years.

(*c*) Two to ten pallas of ragi or paddy per acre.

(*d*) 1,364.08 acres.

(*e*) Yes.

(SRI M. V. KRISHNAPPA)

STATEMENT 'A'

District.	*Taluk.*	*Places.*	*Extent.*
North Kanara,	Yellapur	Yerkinbail	60 00
Mysore	Kollegal	Gangimangala	455 18
		Bylore	214 10
		Huthur	47 61
	Hunsur	Uddur Aspathre	2977 01
	Gundlupet	Bargi	10 00
Tumkur	Tumkur	Akkathangikattekaval	200 00
	Gubbi	Bukkeguddakaval	500 00
	Tiptur	Bidarammanagudikaval	228 08
	C. N. Halli	Halmalledevarakaval	323 00
		,,	300 00
		Mathighatta	530 09
		Madapur	114 18
	Sira	Karepavanahally	120 16
		Thoreyappanahally	18 24
		Doddachikkanahally	250 00
		Mogodu	156 14
Bangalore Rural		Purushogondanahalli	350 00

1-30 P.M.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಎಕರೆ ಒಂದಕ್ಕೆ 2 ರಿಂದ 10 ಪಲ್ಲ ರಾಗಿ ಅಥವಾ ಭತ್ತ ಬೆಳೆಯುತ್ತದೆ ಎಂದು ಹೇಳಿದ್ದಾರೆ. ಇದು ವಾಸ್ತವಾಂಶಕ್ಕೆ ಎಷ್ಟೋ ದೂರ. ಇಲ್ಲಿ ಯಾವ ಭೂಮಿಯನ್ನಾದರೂ ಕಾರೋಣಿ ಮಾಡಿರುವ ಕಡೆಗಳಲ್ಲಿ 2 ರಿಂದ 10 ಪಲ್ಲವರೆಗೆ ಬೆಳೆದಿರುವುದನ್ನು ಯಾರಾದರೂ ಮೂರು ಜನರ ಸಮಿತಿಯನ್ನು ಮಾಡಿ ಕಳಿಸಿದರೆ ತೋರಿಸುವುದಕ್ಕೆ ಸಿದ್ಧವಾಗಿದ್ದಾರೆಯೇ, ಸ್ವಾಮಿ ?

† ಶ್ರೀ ಎಂ. ವಿ. ಕೃಷ್ಣಪ್ಪ.—ಸಿದ್ಧವಾಗಿದ್ದೇನೆ, ಸ್ವಾಮಿ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಇದು ಆಶ್ವಾಸನಾ ಸಮಿತಿಯ ಮುಂದೆ ಬರುತ್ತದೆ. ತಿಪಟೂರು ತಾಲ್ಲೂಕು ಬದರಮ್ಮನಗುಡಿ ಕಾವಲಿನಲ್ಲಿ ಎಷ್ಟು ಜನಗಳಿಗೆ ಜಮೀನು ಕೊಟ್ಟಿದ್ದೀರಿ ಮತ್ತು ಅಲ್ಲಿ ಎಷ್ಟು ಒಕ್ಕಲು ಇವೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಲ್ಲಿ ಕಾರೋಣಿ ಮಾಡಬೇಕೆಂದು ನಮಾಜ ಕಲ್ಯಾಣ ಇಲಾಖೆಯವರಿಗಾಗಿ ಜಮೀನನ್ನು ರಿಸರ್ವ್ ಆಗಿ ಇಟ್ಟಿದೆ. ಬಹುಶಃ ಕ್ರಮ ತೆಗೆದುಕೊಂಡ ತಕ್ಷಣ ಜಮೀನನ್ನು ಕೊಡುತ್ತಾರೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಬದರಮ್ಮನಗುಡಿ ಕಾವಲಿನಲ್ಲಿ 228 ಎಕರೆ ಜಮೀನಿದೆ. ಅಲ್ಲಿ 20 ಸಾವಿರ ರೂಪಾಯಿ ಖರ್ಚುಮಾಡಿ ಬಾವಿ ತೆಗೆಸಿದ್ದಾರೆ, ಮನೆಗಳನ್ನು ಕಟ್ಟಿಸಿದ್ದಾರೆ, ಅಲ್ಲಿ ಒಬ್ಬರೂ ವಾಸ ಮಾಡುತ್ತಿಲ್ಲ, ಇದರಿಂದ ಸರ್ಕಾರಕ್ಕೆ ಆಗಿರುವ ನಷ್ಟವೆಷ್ಟು ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಲ್ಲಿ ಕಾರೋಣಿಯನ್ನು ಪ್ರಾರಂಭ ಮಾಡುವುದಕ್ಕೆ ಬೇಕಾದ ಅನುಕೂಲತೆಗಳನ್ನೆಲ್ಲ ಮಾಡುತ್ತಿದ್ದಾರೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಕಾರೋಣಿ ಮಾಡಿ, ಮನೆಗಳನ್ನು ಕಟ್ಟಿ, ಬಾವಿ ತೆಗೆದು, ಎತ್ತುಗಳನ್ನು ಕೊಟ್ಟು ಎಂಟು ವರ್ಷವಾಯಿತು. ಅವರೆಲ್ಲ ಎತ್ತುಗಳನ್ನು ಮಾರಿಕೊಂಡರು. ಇವರ ಬಗ್ಗೆ ಸರ್ಕಾರಕ್ಕೆ ಅನೇಕ ದೂರುಗಳು ಬಂದಿವೆ. ಆ ವಿಷಯದಲ್ಲಿ ಸರ್ಕಾರ ಗಮನಕ್ಕೆ ತೆಗೆದು ಕೊಂಡು ಅಲ್ಲಿರುವ ಭೂಮಿಯನ್ನು ಬೇರೆಯವರಿಗೆ ಹಂಚುವುದಾಗಲೀ ಅಥವಾ ಕಾರೋಣಿಯನ್ನು ಯಾರು ಯಾರಿಗೆ ಕೊಟ್ಟಿದ್ದರೋ ಅವರನ್ನೇ ತಂದು ಅಲ್ಲಿ ನೆಲೆಸುವಂತೆ ವ್ಯವಸ್ಥೆ ಮಾಡುತ್ತಾರೆಯೇ ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಲ್ಲಿಗೆ ಯಾರು ಹೋಗಿಲ್ಲ ಎಂದು ಮಾನ್ಯ ಸದಸ್ಯರೇ ಹೇಳುತ್ತಾರೆ. ಅಲ್ಲಿಗೆ ಯಾರೂ ಹೋಗದೆ ಎತ್ತುಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಲಕ್ಕಪ್ಪ.—ಅಕ್ಕತಂಗಿ ಕಟ್ಟೆ ಕಾವಲಿನಲ್ಲಿ 200 ಎಕರೆ ಜಮೀನಿದೆ ಎಂದು ಹೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟ ಹಾಗೆ 16 ಸಾವಿರ ರೂಪಾಯಿಗಿಂತ ಹೆಚ್ಚಿಗೆ ಒಬ್ಬ ಸೆಕ್ರೆಟರಿಯಾದವರು ಹಣವನ್ನು ದುರುಪಯೋಗಪಡಿಸಿ ಊರೂರು ಅಲೆಯುತ್ತಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಆ ಬಗ್ಗೆ ದೂರುಗಳು ಬಂದಿದ್ದು ಆ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿ ಈ ಸಭೆಗೆ ವಿವರವಾಗಿ ತಿಳಿಸುವುದಕ್ಕೆ ವ್ಯವಸ್ಥೆ ಮಾಡುತ್ತಾರೆಯೇ, ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ರೀತಿ ಕಾರೋಣಿ ಮಾಡಿ, ಅದಕ್ಕೆ ಸಂಬಂಧಪಟ್ಟ ಹಣವನ್ನು ದುರುಪಯೋಗಪಡಿಸಿಕೊಂಡಿದ್ದರೆ ಸಂಬಂಧಪಟ್ಟ ಇಲಾಖೆಯವರಿಗೆ ದೂರು ಬಂದರೆ ಅವರು ಕ್ರಮ ಕೈಕೊಳ್ಳುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತುಮಕೂರು ಜಿಲ್ಲೆಯಲ್ಲಿ ಮಧುಗಿರಿ ತಾಲ್ಲೂಕಿನಲ್ಲಿ ಇಂದಿರಾ ಕಾರೋಣಿ ಮಾಡಿ ಅದಕ್ಕೆ ಒಂದು ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಅಲ್ಲಿ ಎತ್ತುಗಳಿಲ್ಲ, ಗುಡಿಸಲುಗಳಿಲ್ಲ, ಏನೂ ಇಲ್ಲ. ಇದು ಏನಾಗಿದೆ ಎಂಬುದನ್ನು ತಿಳಿಸುತ್ತಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ —ವಿಚಾರ ಮಾಡಿ ಹೇಳುತ್ತೇನೆ.

ಶ್ರೀ ಎಸ್. ನುಚ್ಚಯ್ಯ ನಾಯಕ್.—ಅಗ್ರಿಕಲ್ಚರರ್ ಕಾರೋಣಿಗಳನ್ನು ಮಾಡುವಾಗ ಯಾವ ಆಧಾರದ ಮೇರೆ ಮಾಡುತ್ತಾರೆ ಸ್ವಾಮಿ ? ಪಟ್ಟಿಯಲ್ಲಿ ಒಂದು ಕಡೆ 10 ಎಕರೆ, ಬೇರೊಂದು ಕಡೆ 2,977 ಎಕರೆ ಕೊಟ್ಟಿರುವುದಾಗಿ ತೋರಿಸಿದ್ದೀರಿ.

ಶ್ರೀ ಎಂ. ವಿ. ಕೃಷ್ಣಪ್ಪ.—ಎಲ್ಲಿಯಾದರೂ ದೊಡ್ಡ ಪ್ರಮಾಣದಲ್ಲಿ ಸರಿಯಾದ ಭೂಮಿ ಇದ್ದರೆ ಅದನ್ನು ಕಾರೋಣಿಗೆ ಕೊಡಬೇಕೆಂದು ಪೂರ್ವದಿಂದಲೂ ಒಂದು ಕಾನೂನನ್ನು ಮಾಡಿಕೊಂಡಿದ್ದಾರೆ. ಆ ದೃಷ್ಟಿಯಿಂದ ಕೆಲವು ಸ್ಥಳಗಳಲ್ಲಿ ರಿಸರ್ವ್ ಮಾಡಿದೆ. ಹಾಗೆ ರಿಸರ್ವ್ ಮಾಡಿರುವ ಸ್ಥಳಗಳನ್ನು ಪಟ್ಟಿಯಲ್ಲಿ ಕೊಟ್ಟಿದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಕೆಲವು ಕಡೆ ಜಮೀನನ್ನು ರಿಸರ್ವ್ ಮಾಡಿಕೊಂಡಿದ್ದಾರೆ. ದೇಶದಲ್ಲಿನ ಆಹಾರ ಪರಿಸ್ಥಿತಿ ಉಲ್ಬಣವಾಗಿರುವುದರಿಂದ ಅದನ್ನು ವ್ಯವಸಾಯಗಾರರಿಗೆ ಕೊಡಲು ಏನಾದರೂ ವ್ಯವಸ್ಥೆ ಮಾಡುತ್ತಾರೆಯೇ, ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹರಿಜನ ಕಾರೊಣಿಗಳನ್ನು ಕಟ್ಟುವುದಕ್ಕೆ ಬದಲು ರೈತರಿಗೆ, ವ್ಯಕ್ತಿಗಳಿಗೆ ಕೊಡಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಇದನ್ನು ಹಾಗೆ ಕೊಟ್ಟರೆ ಮತ್ತೆ ಕಾರೋಣಿ ಮಾಡಬೇಕಾದರೆ ಜಮೀನು ಸಿಕ್ಕುವುದಿಲ್ಲ. ಹೀಗೆ ರಿಸರ್ವ್ ಮಾಡಿರುವುದೆಲ್ಲ ಕಾವಲುಗಳು ಅವೆಲ್ಲ ಹುಲ್ಲುಗಾವಲುಗಳು. ಕಾರೊಣಿಯನ್ನು ಯಾವಾಗ ಪ್ರಾರಂಭ ಮಾಡಿದರೆ ಆಗ ಕಾರೋಣಿ ಯಾಗುತ್ತದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—1364.08 ಎಕರೆ ಖಾಲಿ ಬಿದ್ದಿದೆ ಎಂದು ಹೇಳಿದ್ದಾರೆ. ಯಾವ ಯಾವ ಗ್ರಾಮಗಳಲ್ಲಿ ಖಾಲಿ ಬಿದ್ದಿದೆ, ಖಾಲಿ ಬೀಳಲಿಕ್ಕೆ ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಕಾರೋಣಿ ಮಾಡಬೇಕಾದ ಸ್ಥಳಗಳನ್ನೆಲ್ಲ ಕೊಟ್ಟಿದೆ. ಕಾರೋಣಿ ಆಗಬೇಕಾದರೆ ಅನೇಕ ಕಷ್ಟಗಳಿವೆ. ಸ್ವಂತವಾಗಿ ಭೂಮಿಯನ್ನು ಕೊಟ್ಟರೆ ರೈತರು ಅಲ್ಲಿಗೆ ಹೋಗುತ್ತಾರೆ. ಒಂದು ಕಡೆ ಕಾರೋಣಿ ಎಂದು ಕೆಲಸ ಮಾಡಬೇಕು ಎಂದರೆ ಅವರಿಗೆ ಅಭ್ಯಾಸವಿಲ್ಲದೆ ಇರುವುದರಿಂದ ಜನ ಹೋಗುವುದಿಲ್ಲ. ಮಾಡುವುದು ಸ್ವಲ್ಪ ಕಷ್ಟತರವಾದ ಕೆಲಸ. ಕಾರೋಣಿ ಕೆಲವು ಕಡೆ ಚೆನ್ನಾಗಿ ನಡಿಯುತ್ತದೆ, ಕೆಲವು ಕಡೆ ಚೆನ್ನಾಗಿ ನಡೆಯದೆ ಸರ್ಕಾರಕ್ಕೆ ಹಣ ನಷ್ಟವಾಗುತ್ತದೆ.

ಶ್ರೀ ಎನ್. ಹುಚ್ಚೇಗೌಡ.—ಗುಬ್ಬಿ ತಾಲ್ಲೂಕಿನಲ್ಲಿ ಬಿದರಹಳ್ಳಿ ಕಾರೋಣಿ ಮಾಡಬೇಕೆಂದು ತೀರ್ಮಾನವಾಗಿತ್ತು. ಅದು ಈ ಪಟ್ಟಿಯಲ್ಲಿಲ್ಲ. ಅದು ಏನಾಗಿದೆ ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬುಕ್ಕೇಗೌಡ್ರ ಕಾವಲು ಎಂದು ಇದೆ. ಮಾನ್ಯ ಸದಸ್ಯರು ಹೇಳುತ್ತಿರುವುದು ನಮ್ಮ ರೆಕ್ಕದಲ್ಲಿಲ್ಲ.

ಶ್ರೀ ಎಸ್. ನುಚ್ಚಯ್ಯ ನಾಯಕ್.—10 ಎಕರೆಯ ಒಂದು ಪ್ಲಾಟನ್ನು ವ್ಯವಸಾಯ ಕಾರೋಣಿಗಾಗಿ ರಿಸರ್ವ್ ಇಡುವಂಥ ಕ್ರಮ ಇನ್ನೂ ಊರ್ಜಿತದಲ್ಲಿದೆಯೋ ?

ಶ್ರೀ ಎಂ. ವಿ. ಕೃಷ್ಣಪ್ಪ.—10 ಎಕರೆ ಕಾರೋನಿಗೆ ಆಗುವುದಿಲ್ಲ ಎಂದು ಗೊತ್ತಿದೆ. ಕಾರೋನಿ ಮಾಡಬೇಕಾದರೆ ನೂರಾರು ಎಕರೆ ಇದ್ದರೆ ಉತ್ತಮ.

ಶ್ರೀ ಬಿ. ಬೈರಪ್ಪಾಜಿ.—ಈ ಕಾರೋನಿಗಳನ್ನು ಮಾಡುವುದರಿಂದ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ಲುಕ್ಸಾನು ಆಗುತ್ತದೆ, ಜನರಿಗೂ ಕೂಡ ಹಿಂಸೆ. ಇಂಥದ್ದರಲ್ಲಿ ವ್ಯವಸಾಯ ಮಾಡಿದರೆ ಹೆಚ್ಚಿಗೆ ಬೆಳೆಯಿಯುವುದೂ ಇಲ್ಲ. ಈ ಪದ್ಧತಿಯನ್ನು ತಪ್ಪಿಸಿ ವ್ಯಕ್ತಿಗಳಿಗೆ ಯಾರು ಯಾರಿಗೆ ಅವಶ್ಯಕತೆ ಇದೆಯೋ ಅವರಿಗೆ, ಹರಿಜನರು, ಗಿರಿಜನರು, ಜಮೀನು ಇಲ್ಲದವರು ಇಂಥ ರೈತರಿಗೆ ಕೊಡುವ ವ್ಯವಸ್ಥೆ ಇನ್ನು ಮುಂದಾದರೂ ಸರ್ಕಾರ ಮಾಡುತ್ತೆದೆಯೇ, ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕಾರೋನಿಗಳನ್ನು ಮಾಡುವುದು ಕಷ್ಟತರವಾದ ಕೆಲಸ ಮತ್ತು ಸರ್ಕಾರಕ್ಕೆ ಅದರಿಂದ ನಷ್ಟವಾಗಿದೆ. ಉತ್ಪತ್ತಿಯೂ ಕಡಮೆಯಾಗಿದೆ. ಈ ದೃಷ್ಟಿಯಿಂದ ಮತ್ತು ಅನುಭವದಿಂದ ಸರ್ಕಾರ ಮತ್ತೆ ಇದನ್ನು ಪರಿಶೀಲನಬೇಕಾಗುತ್ತದೆ.

ಶ್ರೀ ಕೆ. ಲಕ್ಕಪ್ಪ.—ಅಕ್ಕ ತಂಗಿ ಕಚ್ಚೆ ಕಾವಲು 200 ಎಕರೆ ಪ್ರದೇಶವನ್ನು ಹೊಂದಿದ್ದರೂ ಕೂಡ 16 ಸಾವಿರಕ್ಕೆ ಮೇಲ್ಪಟ್ಟು ಹಣ ದುರುಪಯೋಗವಾಗಿವೆ. ಒಬ್ಬ ಸೆಕ್ಶೆಟರಿ ಅದನ್ನು ದುರುಪಯೋಗಪಡಿಸಿಕೊಂಡಿದ್ದಾರೆ, ತಕ್ಷಣವೇ ವಿಚಾರಣೆ ಮಾಡಿ ಆ ಬಗ್ಗೆ ಏನಾದರೂ ಕಾರ್ಯಕ್ರಮ ತೆಗೆದುಕೊಂಡು ಸಭೆಗೆ ತಿಳಿಸುತ್ತಾರೆಯೇ ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸಂಬಂಧಪಟ್ಟ ಇರಾಖೆಗೆ ಬರೆದರೆ ತಕ್ಷಣ ಕ್ರಮ ತೆಗದುಕೊಳ್ಳುತ್ತಾರೆ.

ಶ್ರೀ ಕೆ. ಲಕ್ಕಪ್ಪ.—ಈಗ ನಾನು ಹೇಳುತ್ತಿದ್ದೇನಲ್ಲ, ಸ್ವಾಮಿ !

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ಹೇಳುವ ವಿಚಾರ ಸಮಾಜ ಕಲ್ಯಾಣ ಖಾತೆಯ ಮಂತ್ರಿಗಳ ಕಡೆಯಿಂದ ವಿಚಾರಣೆ ಆಗಬೇಕಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮತಿಘಟ್ಟ, ಮಾದಾಪುರ ಮುಂತಾದ ಕಡೆ 400, 500 ಎಕರೆ ಭೂಮಿ ಇದೆ ಎಂದು ಹೇಳಿದ್ದಾರೆ. ಇಲ್ಲಿ ಕಾರೊನಿ ಇಂಡಿವಿಜುಯರ್ ಹೋಲ್ಡಿಂಗ್ ರೀತಿಯಲ್ಲಿ ನಡೆಯುತ್ತಿದೆಯೇ, ಅಥವಾ ಸಹಕಾರ ತತ್ವದ ಮೇಲೆ ನಡೆಯುತ್ತಿದೆಯೇ ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕಾರೋನಿಯನ್ನು ಮಾಡಿದಾಗ ಸಹಕಾರ ತತ್ವದ ಮೇಲೆ ನಡನುತ್ತೇವೆ.

Supply of power for Agricultural purposes.

*Q.—308. Sri B. BYRAPPAJI (Turuvekere).—

Will the Government be pleased to state :—

(*a*) whether it has come to their notice that in view of the reduction in the cost of one H.P.I.P. set Rs. 2,500 to Rs. 600, the ryots are put to hardships as adequate power is not being supplied to them for purpose of agriculture ;

(*b*) the immediate steps they would take for supplying electricity as early as possible for the said purpose ?

*A.—Sri G. B. SHANKAR RAO (Parliamentary Secretary to the Minister for Public Works).—

(*a*) Yes.

(*b*) The Board have since refixed the ceiling limit at Rs. 2,500 per H. P.

ಶ್ರೀ ಬೈರಪ್ಪಾಜಿ.—ಬೋರ್ಡಿನವರು ಒಂದು ಅಶ್ವ ಶಕ್ತಿಗೆ 600 ರೂಪಾಯಿ ಇದ್ದುದನ್ನು 2,500 ರೂಪಾಯಿಗಳಿಗೆ ಹೆಚ್ಚಿಸಿದ್ದಾರೆಂದು ತಿಳಿಸಿದ್ದಾರೆ. ಹೀಗೆ ಹೆಚ್ಚಿಸಿದ್ದರೂ ಕೂಡ ಜನಗಳಿಗೆ ಯಾವ ವಿಧವಾದ ಕೆಲಸವೂ ಆಗುತ್ತಿಲ್ಲ. ಅಂದಾಜುಗಳನ್ನು ತಯಾರು ಮಾಡುತ್ತಿಲ್ಲ